**ಭಗವದ್ಗೀತಾ ಚಿಂತನೆ**

# ಜ್ಞಾನೇಶ್ವರಿಯಲ್ಲಿ ಕರ್ಮ ಜಿಜ್ಞಾಸೆ

ಡಾ. ಸಿ. ಎನ್. ದೇಶಪಾಂಡೆ

**ಭ**ಗವದ್ಗೀತೆಯ ಪ್ರಧಾನ ವಿಷಯ ಬ್ರಹ್ಮವಿದ್ಯೆ. ಬ್ರಹ್ಮಸ್ವರೂಪನೇ ಆದ ಜೀವನ ಅಜ್ಞಾನವನ್ನು ತೊಲಗಿಸಿ, ಅವನು ಕಳೆದುಕೊಂಡ ತನ್ನದೇ ಆದ ಪರಮಾನಂದವನ್ನು ಪುನಃ ಅವನಿಗೆ ಒದಗಿಸುವುದೇ ಅದರ ಗುರಿ. ಸಂಸಾರಕ್ಕೆ ಪೂರ್ಣ ವಿದಾಯ ಹೇಳದ ಹೊರತು ಪರಮಾರ್ಥ ಸಿದ್ಧಿಸಲಾರದು. ಸಂಸಾರವೆಂದರೆ ಕರ್ಮಗಳ ಜಾಲ. ಮಾನವನ ಮನಸ್ಸಿನಲ್ಲಿಯ ಸಂಸ್ಕಾರಗಳು ಇದನ್ನು ರೂಪಿಸಿವೆ. ಸಂಸ್ಕಾರಗಳಿಂದ ಕರ್ಮಗಳು ಮತ್ತು ಕರ್ಮಗಳಿಂದ ಸಂಸ್ಕಾರಗಳು; ಹೀಗೆ ಬೀಜವೃಕ್ಷನ್ಯಾಯದಂತಿರುವ ಈ ವಿಷಚಕ್ರವೇ ಸಂಸಾರ. ಇದರಿಂದ ಬಿಡುಗಡೆ ಹೊಂದಿ ತಾನು ಹಾಯಾಗಿ ಇರುವದು ಮಾನವನ ಕರ್ತವ್ಯ. ಗೀತೆಯ ವಿಶಿಷ್ಟ ಕೊಡುಗೆಯಾದ ಕರ್ಮ ಯೋಗವು ಇದಕ್ಕೆ ಪ್ರಥಮ ಸಾಧನವಾಗಿದೆ. ಕರ್ಮಗಳನ್ನು ಮಾಡು ತ್ತಿದ್ದರೂ, ಅವುಗಳ ಬಾಧಕತೆಯನ್ನು ನಿವಾರಿಸಿ, ಮಾನವನಿಗೆ ಜ್ಞಾನಕ್ಕೆ ಅರ್ಹತೆಯನ್ನು ಒದಗಿಸುವ ಉಪಕಾರವನ್ನು ಗೀತೆಯು ಮಾಡಿದೆ.

ಪವಾಡ ಪುರುಷರಾದ ಸಂತ ಜ್ಞಾನೇಶ್ವರರು ೧೩ ನೆಯ ಶತ ಮಾನದ ಕೊನೆಯ ಭಾಗದಲ್ಲಿ ಮಹಾರಾಷ್ಟ್ರದಲ್ಲಿ ಆಗಿಹೋದರು. ಅವರು ಕೇವಲ ತಮ್ಮ ೨೨ ವರ್ಷಗಳ ವಯಸ್ಸಿನಲ್ಲಿ, ಅಲ್ಲಿ ಆಧ್ಯಾತ್ಮಿಕ ಕ್ರಾಂತಿಯನ್ನು ಮಾಡಿದರು. ತಮ್ಮ ಗುರುಗಳ ಆಣತಿಯಂತೆ ಅವರು ತಮ್ಮ ೧೩ ನೆಯ ವಯಸ್ಸಿನಲ್ಲಿ ಗೀತೆಯ ಮೇಲೆ **'ಭಾವಾರ್ಥದೀಪಿಕಾ'** ಎಂಬ ಸವಿಸ್ತಾರ ವ್ಯಾಖ್ಯಾನವನ್ನೂ ರಚಿಸಿದರು. **'ಜ್ಞಾನೇಶೋ ಭಗವಾನ್ ವಿಷ್ಣುಃ'** ಎಂಬ ಮಾತು ಅವರ ಮಹಾತ್ಮ್ಯೆಯನ್ನು ಸೂಚಿ ಸುವ ವಾಕ್ಯ. ಭಗವಂತನು ಅರ್ಜುನನಿಗೆ ಸಂಸ್ಕೃತದಲ್ಲಿ ಉಪದೇಶಿಸಿ ದನು; ಅದನ್ನು ಅವನೇ ವೇಷಪಲ್ಲಟಮಾಡಿ ಜ್ಞಾನೇಶ್ವರರಾಗಿ ಬಂದು ಮರಾಠಿಯಲ್ಲಿ ಜನಸಾಮಾನ್ಯರಿಗೆ ಬೋಧಿಸಿದನೆಂದು ಮರಾಠಿಗರ ನಂಬಿಕೆ. ಆ ಗ್ರಂಥವು 'ಜ್ಞಾನೇಶ್ವರಿ' ಇಲ್ಲವೇ 'ಜ್ಞಾನದೇವೀ' ಎಂದು ಪ್ರಸಿದ್ಧವಾಗಿದೆ. ಅದು ಅಷ್ಟು ಪ್ರಾಮಾಣಿಕ ಮತ್ತು ಪ್ರಾಸಾದಿಕ. ಅದರಲ್ಲಿರುವ ಕರ್ಮಯೋಗದ ಬಗೆಗಿನ ವಿಚಾರಗಳನ್ನು ಕನ್ನಡದಲ್ಲಿ ಸಂಗ್ರಹಿಸುವ ಪ್ರಯತ್ನವಿದು.

ಸಂಸಾರದಲ್ಲಿಯ ದುಃಖಪರಂಪರೆಗೆ ಮಾನವನ ಇಂದ್ರಿಯ ಮನಸ್ಸುಗಳು ಬಹಿರ್ಮುಖವಾಗಿರುವುದೇ ಕಾರಣ. ಈ ಪ್ರವೃತ್ತಿ ಯಿಂದ ಮಾನವನು ತನ್ನಂತರಂಗದಲ್ಲಿಯೇ ಇರುವ ಶಾಶ್ವತ ಸುಖದ ಜಿಜ್ಞಾಸೆಯನ್ನು ಮರೆತು, ಹೊರಗಿನ ಕ್ಷಣಿಕ ವಿಷಯಸುಖಕ್ಕೆ ಹಾತೊರೆ ಯುತ್ತಾನೆ. ಕರ್ಮವು ಭಗವಂತನ ಸೃಷ್ಟಿನಿರ್ಮಾಣದ ಆದ್ಯ ಸ್ಫುರಣ ವಾಗಿದೆ. **'ವಿಸರ್ಗಃ ಕರ್ಮ ಸಂಜ್ಞಿತಃ'**– ಆ ನೈಸರ್ಗಿಕ ಕರ್ಮದೊಡನೆ ತನ್ನ ಕರ್ಮಗಳನ್ನೂ ಬೆರೆಸಿ, ಮಾನವನು ಶರೀರಧಾರಿಯಾಗಿದ್ದಾನೆ. ಆದ್ದರಿಂದ ಕರ್ಮಗಳು ಶರೀರಕ್ಕೆ ಉಪಾದಾನ ಕಾರಣವಾಗಿವೆ. ಹುಟ್ಟು ಒಂದು ಕರ್ಮ; ಜೀವಿಯು ಕೂಡ ಒಂದು ಕರ್ಮ ಮತ್ತು ಸಾವು ಕೂಡ ಕರ್ಮ. ಆದ್ದರಿಂದ ಮಾನವನು ಕರ್ಮಗಳನ್ನು ಮಾಡುವುದಿಲ್ಲ ಎಂದರೆ, ಅದು ಆಗದ ಮಾತು. ಗಡಿಗೆ–ಮಡಿಕೆಗಳು ಮಣ್ಣಿಗೆ ಬೇಸೆತ್ತರೆ ನಡೆದೀತೆ? ನೂಲುಗಳಿಲ್ಲದೇ ಬಟ್ಟೆಗೆ ಅಸ್ತಿತ್ವವೆಲ್ಲಿ? ದೇಹದ ಆಕೃತಿಯನ್ನು ಹೊಂದಿ, ಕರ್ಮ ಮಾಡಲಾರೆನು ಎನ್ನುವುದ ಕ್ಕಾಗುವುದಿಲ್ಲ. ಪ್ರಕೃತಿಯು ಅವನನ್ನು ಬಲವಾಗಿ ಮಾಡಿಸುತ್ತದೆ. ಆದ್ದರಿಂದ ಕರ್ಮಗಳನ್ನು ಮಾಡುವುದು ಅಥವಾ ಬಿಡುವುದು ಪ್ರಕೃತಿಯ ಜೊತೆಗೆ ಜೀವಿಯ ಸಂಯೋಗ ಅಥವಾ ವಿಯೋಗಗಳ ಮೇಲೆ ಅವಲಂಬಿಸಿದೆ. ಹೀಗಾಗಿ, ಪ್ರಕೃತಿಯ ಜೊತೆಗೆ ಜೀವಿಗೆ ತಾದಾತ್ಮ್ಯವಿರುವಾಗ, ಕರ್ಮವು ಅನಿವಾರ್ಯ ಎನ್ನುವುದು ಇದರಿಂದ ಸಿದ್ಧವಾಗುತ್ತದೆ.

ಕರ್ಮಗಳು ಅನಿವಾರ್ಯವಾಗಿದ್ದರೆ ಎಂತಹ ಕರ್ಮಗಳನ್ನು ಮಾಡಬೇಕು? ಎಂತಹವುಗಳನ್ನು ಬಿಡಬೇಕು? ಪಶುಗಳಿಗೆ ಈ ಸಮಸ್ಯೆಯಿಲ್ಲ. ವಿವೇಕಿಯಾದ ಮನುಷ್ಯನ ಹೊಣೆ ಇದು. ಇದನ್ನೂ ಭಗವಂತನು ಗೀತೆಯಲ್ಲಿ ಹೇಳಿರುವನು. ವೇದಗಳು ಭಗವಂತನ ವಾಣಿ. ಅವು ಮಾನವನ ಕಲ್ಯಾಣಕ್ಕೆ ಯೋಗ್ಯವಾದ ಕರ್ಮಗಳನ್ನು **ವಿಹಿತ**ವೆಂದೂ, ಅವನಿಗೆ ಕೆಡುಕನ್ನು ಮಾಡುವ ಕರ್ಮಗಳನ್ನು **ನಿಷಿದ್ಧ**ವೆಂದೂ ವಿಂಗಡಿಸಿವೆ. ಅಪ್ರಿಯವಾಗಿದ್ದರೂ, ವಿಹಿತ ಕರ್ಮ ಗಳನ್ನು ಮಾಡಲೇಬೇಕು; ಪ್ರಿಯವಾಗಿದ್ದರೂ, ನಿಷಿದ್ಧಕರ್ಮಗಳನ್ನು ಮಾಡಕೂಡದು. ಇದು ಭಗವಂತನ ಶಾಸನವಾಗಿದೆ.

ವಿಹಿತ ಕರ್ಮಗಳಲ್ಲಿಯೂ **ನಿತ್ಯ, ನೈಮಿತ್ತಿಕ ಮತ್ತು ಕಾಮ್ಯ** ಎಂಬ ಮೂರು ಪ್ರಕಾರಗಳಿವೆ. ತ್ರಿಕಾಲ ಸಂಧ್ಯಾವಂದನಾದಿಗಳು ನಿತ್ಯ ಕರ್ಮ ಗಳು; ಪಿತೃಶ್ರಾದ್ಧಾದಿಗಳು ನೈಮಿತ್ತಿಕ ಮತ್ತು ಪುತ್ರವಿತ್ತಾದಿಗಳನ್ನು ಬಯಸಿ ಮಾಡುವಂಥವು ಕಾಮ್ಯಗಳು. ಮಾನವನ ಪ್ರವೃತ್ತಿಗೆ ಅನು ಗುಣವಾಗಿ ಮಾಡುವ ಕಾಮ್ಯಕರ್ಮಗಳಿಗೆ ಶಾಸ್ತ್ರಗಳ ನಿರ್ಬಂಧವಿಲ್ಲ. ಆದರೆ ಅವನ್ನು ಮಾಡದೆ ಬಿಟ್ಟರೆ ಮಾತ್ರ, ನಿವೃತ್ತಿ ಎಂಬ ಮಹಾಫಲ ದೊರಕುತ್ತದೆ. ಇನ್ನು ನಿತ್ಯ ಮತ್ತು ನೈಮಿತ್ತಿಕ ಕರ್ಮಗಳಿಗೆ ಫಲವಿಲ್ಲ ವೆಂದು ಕೆಲವರ ಅಭಿಪ್ರಾಯ. ಆದರೆ ಜ್ಞಾನೇಶ್ವರರು ಅವುಗಳಿಗೂ 'ದುರಿತಕರ್ಮಗಳು ಕ್ಷಯವಾಗುವುದು' ಮತ್ತು 'ಜ್ಞಾನಕ್ಕೆ ಅರ್ಹತೆ ಅಧಿಕವಾಗುವುದು' ಎಂಬ ಎರಡು ಫಲಗಳಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಗೀತೆಯಲ್ಲಿ ಭಗವಂತನು, ಎಷ್ಟೇ ಕಠಿಣವಿದ್ದರೂ ಮಾನವನು ಸ್ವಧರ್ಮವನ್ನು ಬಿಡಕೂಡದು ಮತ್ತು ಮರಣದ ಪ್ರಸಂಗದಲ್ಲಿಯೂ ಪರಧರ್ಮವನ್ನು ಅನುಸರಿಸಕೂಡದು ಎಂದು ಆದೇಶಿಸಿದ್ದಾನೆ. ಮಗುವಿಗೆ ತನ್ನ ತಾಯಿ ಕುರೂಪಿಯಾಗಿದ್ದರೂ, ಅವಳೇ ನಮಗೆ ಪೂಜ್ಯಳಾದವಳು, ಅಲ್ಲವೇ. ಇದೂ ಹಾಗೆಯೇ. ಇದರ ಸಾರಾಂಶ ವೇನೆಂದರೆ, ಕರ್ಮಗಳನ್ನು ಬಿಡುವಂತಿಲ್ಲ; ನಿಷಿದ್ಧ ಕರ್ಮಗಳನ್ನು ಮಾಡಕೂಡದು; ವಿಹಿತ ಕರ್ಮಗಳನ್ನು ಮಾಡುವಾಗಲೂ ಸ್ವಧರ್ಮ ವನ್ನು ಬಿಡಕೂಡದು. ಇದು ಧರ್ಮ ಮತ್ತು ಪ್ರೇಯಸ್ಸಿನ ಅಂದರೆ, ಲೌಕಿಕ ಸಮೃದ್ಧತೆಯ ದಾರಿ.

*ಮಾನ್ಯ ಲೇಖಕರು ಮರಾಠಿ ಮತ್ತು ಕನ್ನಡದಲ್ಲಿ ವಿದ್ವಾಂಸರು. ಜ್ಞಾನೇಶ್ವರಿ ಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರು ಧಾರವಾಡ ನಿವಾಸಿಗಳು.*

ಕರ್ಮಯೋಗವು ಶ್ರೇಯಸ್ಸಿಗಾಗಿ ಗೀತೆಯ ವಿಶೇಷ ಕೊಡುಗೆಯಾಗಿದೆ. ಇದು ಕರ್ಮಗಳನ್ನು ಮಾಡಿಯೂ, ಅವುಗಳಲ್ಲಿಯ ಬಾಧಕತೆಯನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವಾಗಿದೆ. **ಯೋಗಃ ಕರ್ಮಸು ಕೌಶಲಮ್ – ಕರ್ಮಯೋಗವೆಂದರೆ, ಜಡ ಕರ್ಮಕ್ಕೆ ಬುದ್ಧಿಯ ಜೋಡಣೆಯ ಪ್ರಕ್ರಿಯೆ**. ತನ್ನಷ್ಟಕ್ಕೆ ಕರ್ಮವು ಸಾಧಕವೂ ಅಲ್ಲ, ಬಾಧಕವೂ ಅಲ್ಲ. ಆದರೆ ವಾಸನಾಯುಕ್ತ ಕರ್ಮಗಳು ಮಾತ್ರ ಮಾನವನ ಶ್ರೇಯಸ್ಸಿಗೆ ಬಾಧಕಗಳಾಗಿವೆ. ಮಾನವನ ಮನಸ್ಸಿನಲ್ಲಿರುವ ವಾಸನೆಗಳು ಅಥವಾ ಸಂಸ್ಕಾರಗಳು ಕರ್ಮಗಳಲ್ಲಿ ಕರ್ತೃತ್ವಬುದ್ಧಿ ಮತ್ತು ಫಲಾಶೆಗಳನ್ನು ಬೆರೆಸಿ, ಅವುಗಳನ್ನು ಅಧ್ಯಾತ್ಮ ಪ್ರಗತಿಗೆ ಬಾಧಕಗಳನ್ನಾಗಿ ಮಾಡುತ್ತವೆ. ಮಾನವನಲ್ಲಿ ಕರ್ತೃತ್ವಬುದ್ಧಿ ಮತ್ತು ಫಲಾಶೆಗಳನ್ನು ನಿವಾರಣೆ ಮಾಡುವುದೇ ಕರ್ಮಯೋಗ. ಚಿತ್ತಶುದ್ಧಿ ಮತ್ತು ಅದರಿಂದ ಉಂಟಾಗುವ ಆತ್ಮಜ್ಞಾನಕ್ಕೆ ಅರ್ಹತೆಗಳೇ ಕರ್ಮಯೋಗದ ಫಲಗಳು. ಇದರ ಆಚರಣೆ, ಕವಚವನ್ನು ಧರಿಸಿ, ರಣಾಂಗಣಕ್ಕೆ ಹೋದಂತೆ ರಕ್ಷಾದಾಯಕವಾದುದು. ಸತ್ತ್ವಾದಿ ಗುಣಗಳಿಂದ ಯುಕ್ತನಾದ ಮನುಷ್ಯನು ಕರ್ಮಗಳನ್ನು ಮಾಡುತ್ತಾನೆ; ಅವುಗಳ ಅಭಿಮಾನವನ್ನು ತನ್ನ ಮೇಲೆ ಹೊತ್ತುಕೊಳ್ಳುತ್ತಾನೆ. ಆದರೆ ನಿಜವಾಗಿಯೂ ಮನುಷ್ಯನ ನೈಜಸ್ವರೂಪ ಆತ್ಮ; ಆದ್ದರಿಂದ ಮಾನವನು ಅಕರ್ತ ಮತ್ತು ಅಭೋಕ್ತಾ; ಫಲವೂ ಅವನ ಅಧೀನದಲ್ಲಿಲ್ಲ. ಆದರೆ, ಜೀವನು ಕರ್ತೃತ್ವ ಮತ್ತು ಫಲಾಶೆಗಳನ್ನು ತನ್ನ ಮೇಲೆ ಹೊತ್ತುಕೊಂಡು, ಪ್ರಪಂಚದಲ್ಲಿ ತೊಳಲಾಡುತ್ತಾನೆ. ಕಳ್ಳತನವನ್ನು ಮಾಡದಿದ್ದರೂ, ಕಳ್ಳತನದ ಆರೋಪವನ್ನು ತನಗೆ ಅಂಟಿಸಿಕೊಂಡವನು, ರಾಜಾಜ್ಞೆಯಂತೆ ಶಿಕ್ಷೆಯನ್ನು ಅನುಭವಿಸಬೇಕಲ್ಲವೆ? ಅದೇ ರೀತಿ ಆತ್ಮಸ್ವರೂಪನಾದ ಮನುಷ್ಯನು ಸ್ವತಃ ಪರಿಪೂರ್ಣ ಮತ್ತು ನಿತ್ಯತೃಪ್ತನಾಗಿದ್ದರೂ ಅವನು ಅಪೂರ್ಣನೆಂಬಂತೆ ಭಾವಿಸುವುದರಿಂದ, ಭಿಕ್ಷೆ ಬೇಡುವವನಂತೆ ಫಲಾಶೆಯಿಂದ ಕರ್ಮ ಮಾಡುತ್ತಾನೆ.

ಕರ್ತೃತ್ವಾಭಿಮಾನ ಮತ್ತು ಫಲಾಶೆಗಳು ಆತ್ಮಜ್ಞಾನಕ್ಕೆ ಏಕೆ ಬಾಧಕಗಳಾಗಿವೆ? ಏಕೆಂದರೆ ಕರ್ತೃತ್ವಬುದ್ಧಿಯು ಅಹಂಕಾರವನ್ನು ಬಲಪಡಿಸುತ್ತದೆ; ಅಹಂಕಾರವು ಬಲಗೊಂಡರೆ ಸಾಧಕನು ಆತ್ಮಜ್ಞಾನದಿಂದ ವಿಮುಖನಾಗುತ್ತಾನೆ. ಫಲಾಶೆಯು ಸಂಸ್ಕಾರಗಳ ಮೂಲಕ ಮನಸ್ಸಿನಲ್ಲಿ ಮಲ–ವಿಕ್ಷೇಪಗಳನ್ನುಂಟುಮಾಡುತ್ತದೆ. ಆದ್ದರಿಂದ ಭಗವಂತನ ಆಜ್ಞೆಯಂತೆ, ನಾವು ಮಾಡುವ ವಿಹಿತಕರ್ಮಗಳನ್ನು ಭಗವಂತನಿಗೇ ಅರ್ಪಿಸಿ, ಅವುಗಳಿಂದ ಬಿಡುಗಡೆ ಹೊಂದಬೇಕು. ಇದು ಅಷ್ಟು ಸುಲಭವಲ್ಲ, ಇದು ದೊಡ್ಡ ತಪಸ್ಸು. ಈಶ್ವರಾರ್ಪಣ ಬುದ್ಧಿಯಿಂದ ಮಾತ್ರ ಇದು ಸುಲಭವಾಗುತ್ತದೆ. ಸಕಲಭೂತಗಳ ಅಹಂಕಾರಗಳನ್ನು ಹೊದ್ದುಕೊಂಡು, ತನ್ನ ಮಾಯೆಯ ಹಿಂದೆ ಅಡಗಿಕೊಂಡು, ಹೊರಗೆ ಜಗದಾಡಂಬರದ ಛಾಯಾಚಿತ್ರವನ್ನು ಪ್ರಕಟಿಸುತ್ತ, ಗಾಳಿಯು ಹುಲ್ಲುಕಡ್ಡಿಯನ್ನು ಹೇಗೋ ಹಾಗೆ ಭೂತಗಳನ್ನೆಲ್ಲ ಸರ್ವಾತ್ಮಕನಾದ ಈಶ್ವರನು ಕರ್ಮಚಕ್ರದಲ್ಲಿ ತಿರುಗಿಸುತ್ತಾನೆ. ಅವನಿಗೆ ಕರ್ಮಗಳ ಫಲರೂಪದ ಪುಷ್ಪಗಳನ್ನರ್ಪಿಸಿದರೆ ಮಾತ್ರವೇ ಅಂತಹ ಕರ್ಮಯೋಗಿಯು ಆತ್ಮಜ್ಞಾನಕ್ಕೆ ಅರ್ಹತೆಯನ್ನು ಪಡೆಯುತ್ತಾನೆ.

**ಸಂಪೂರ್ಣವಾದ ಅನಾಸಕ್ತಿಯ ಲಾಭವೇ ನಾವು ಜೀವನ ಪರ್ಯಂತ ಮಾಡುವ ಕರ್ಮದ ಫಲ. ಅದು ಪ್ರಾಪ್ತವಾದೊಡನೆ, ನಾವು ಪ್ರೇಮದ ಗುರಿಯನ್ನು ತಲುಪಿ ಮುಕ್ತರಾಗುತ್ತೇವೆ. ಆಗ ಪ್ರಕೃತಿ ಬಂಧ ಕಳಚಿ ಬಿದ್ದು, ಪ್ರಕೃತಿಯನ್ನು ಯಥಾವತ್ತಾಗಿ ನೋಡಲು ನಮಗೆ ಸಾಧ್ಯವಾಗುತ್ತದೆ. ಈ ಸ್ಥಿತಿಯಲ್ಲಿ ಪ್ರಕೃತಿ ಇನ್ನು ನಮಗೆ ಸಂಕೋಲೆಗಳನ್ನು ತೊಡಿಸಲಾರದು. ನಾವು ಸಂಪೂರ್ಣವಾಗಿ ಬಿಡುಗಡೆಹೊಂದಿ, ನಮ್ಮ ಕರ್ಮಗಳ ಫಲಗಳನ್ನು ಕುರಿತು ಕ್ಷಣ ಮಾತ್ರವೂ ವಿಚಾರ ಮಾಡುವುದಿಲ್ಲ.** – ಸ್ವಾಮಿ ವಿವೇಕಾನಂದ

ಈ ಸಂದರ್ಭದಲ್ಲಿ ಶ್ರೀಜ್ಞಾನೇಶ್ವರರು ಗೀತೆಯಲ್ಲಿಲ್ಲದ ಒಂದು ವಿಷಯವನ್ನು ಎತ್ತಿದ್ದಾರೆ. ಅರ್ಜುನನು ಶ್ರೀಕೃಷ್ಣನಿಗೆ ಕೇಳುತ್ತಾನೆ– “ನಾನು ಮಾಡಿದ ಕರ್ಮಗಳನ್ನೆಲ್ಲ ನಿನಗೇಕೆ ಅರ್ಪಿಸಬೇಕು?” ಎಂದು. ಅದಕ್ಕೆ ಭಗವಂತನ ಉತ್ತರ ಇದು: “ಅರ್ಜುನಾ, ನಾನು ಫಲತ್ಯಾಗದ ಅರ್ಪಣೆಯನ್ನು ಹೇಳಿದ್ದು ನನ್ನ ಸ್ವಾರ್ಥಕ್ಕಾಗಿ ಅಲ್ಲ. ನಿನಗೆ ಆ ಕರ್ಮಗಳು ಬಾಧಕಗಳಾಗುವುದರಿಂದ ಹಾಗೆ ನಾನು ಹೇಳಿದೆ. ಆಕಾಶದಲ್ಲಿ ಹೊಗೆಯು ವ್ಯರ್ಥವಾಗಿ ಹೋಗುವಂತೆ, ಅವು ವ್ಯರ್ಥವಾಗಿ ಹೋಗಲಿ, ಬಿಡು. ಜ್ಞಾನಸ್ವರೂಪನಾದ ನಾನು ಅವನ್ನು ದಕ್ಕಿಸಿಕೊಳ್ಳುತ್ತೇನೆ. ನಿನಗೆ ಅದು ಸಾಧ್ಯವಿಲ್ಲ.”

ಅಹಂಕಾರ ಪಿಶಾಚಿಯು ಮನಸ್ಸಿನಲ್ಲಿ ಕರ್ಮಗಳ ಮೂಲಕ ಮಲವಿಕ್ಷೇಪಗಳ ಧೂಳಿಯನ್ನೆಬ್ಬಿಸುತ್ತದೆ; ಮಾನವನನ್ನು ಆತ್ಮದರ್ಶನದಿಂದ ವಂಚಿಸುತ್ತದೆ. ಆದರೆ ಕರ್ಮಯೋಗದಿಂದ ಆಂತರಿಕ ಕಣ್ಣುಗಳು ತಿಳಿಯಾಗಿ, ಮನಸ್ಸು ಪ್ರಸನ್ನವಾಗುತ್ತದೆ ಮತ್ತು ಅದು ಆತ್ಮದರ್ಶನಕ್ಕೆ ಸಿದ್ಧವಾಗುತ್ತದೆ. ನಂತರ ಸಮತ್ವಬುದ್ಧಿಯಿಂದ ವೈರಾಗ್ಯವುಂಟಾಗಿ, ಬುದ್ಧಿ ಬಲಗೊಳ್ಳುತ್ತದೆ. ಆಗ ಸಾಧಕನು ಆತ್ಮಜ್ಞಾನದ ವೈರಿಗಳಾದ ಅಹಂಕಾರ, ದರ್ಪ, ಕಾಮ, ಕ್ರೋಧ ಮುಂತಾದವುಗಳನ್ನು ಸದೆಬಡಿದು, ಭಗವಂತನಲ್ಲಿ ಆತ್ಮನಿವೇದನೆಯ ಭಾವವನ್ನು ಹೊಂದುತ್ತಾನೆ. ಅನಂತರ ಅವನೊಂದಿಗೆ ಐಕ್ಯಭಾವವನ್ನು ಪಡೆಯುತ್ತಾನೆ; ಪರಮಾನಂದವನ್ನು ಅನುಭವಿಸುತ್ತಾನೆ.

ಇಲ್ಲಿ ಶ್ರೀಜ್ಞಾನೇಶ್ವರರು ಒಂದು ಆಕ್ಷೇಪಕ್ಕೆ ಉತ್ತರವನ್ನು ನೀಡಿದ್ದಾರೆ. ಭಗವತ್ತತ್ತ್ವದಲ್ಲಿ ಐಕ್ಯವಾದಾಗ ಅದರ ಭೋಗ ಅಥವಾ ಅನುಭವ ಸಾಧ್ಯವಿಲ್ಲ ಎಂದು ಕೆಲವರ ಆಕ್ಷೇಪ. ಇದಕ್ಕೆ ಸಮಾಧಾನ ಹೀಗಿದೆ: ತರುಣನಾಗದೇ ತಾರುಣ್ಯವನ್ನು ಅನುಭವಿಸುವದು ಸಾಧ್ಯವಿಲ್ಲ. ಅದೇ ರೀತಿ, ಬ್ರಹ್ಮಭಾವವನ್ನು ಹೊಂದದೆ, ಬ್ರಹ್ಮಾನಂದವನ್ನು ಹೊಂದಲು ಸಾಧ್ಯವಿಲ್ಲ. ನದಿಯು ಸಮುದ್ರವನ್ನು ಸೇರಿ, ಅದರ ವ್ಯಾಪಕತೆಯನ್ನು ಅನುಭವಿಸುವಂತೆ, ಸಾಧಕನು ಬ್ರಹ್ಮವಾಗಿಯೇ ಬ್ರಹ್ಮಾನಂದವನ್ನು ಅನುಭವಿಸಲು ಸಾಧ್ಯ.

**‘ಕರ್ತೃತ್ವಬುದ್ಧಿಯ ನಿರಸನ ಮತ್ತು ಕರ್ಮಫಲತ್ಯಾಗ’** – ಇಷ್ಟೇ ಕರ್ಮಯೋಗದ ಗುಟ್ಟು. ಇದನ್ನು ಶ್ರೀಜ್ಞಾನೇಶ್ವರರು ಬಹಳ ಪ್ರಭಾವಶಾಲಿಯಾಗಿ ಉಪಮೆ ಅಥವಾ ದೃಷ್ಟಾಂತಗಳಿಂದ ವ್ಯಾಖ್ಯಾನಿಸಿದ್ದಾರೆ. ಪರಮಾರ್ಥದ ಅಂತರ್ ಯಾತ್ರೆಯಲ್ಲಿ ಇದು ಪ್ರಥಮ ಸಾಧನವಾಗಿದೆ. ಆ ನಂತರ ಕಾವ್ಯ ಪ್ರತಿಭೆ, ಕಾವ್ಯನಿರೂಪಣೆಯಲ್ಲಿಯ ಓಜಸ್ಸುಗಳನ್ನು ಮೂಲಗ್ರಂಥವಾದ ಜ್ಞಾನೇಶ್ವರಿಯನ್ನು ಓದಿಯೇ ಸವಿಯಬೇಕು.